ಕರ್ನಾಟಕ ಸರ್ಕಾರ
ಉಪತಹಶೀಲ್ದಾರರವರ ನ್ಯಾಯಾಲಯ
ಉಪತಹಶೀಲ್ದಾರವರ ನಾಡಕಛೇರಿ, ಹಂಪಸಾಗರ

ಸಂ/ಕಂ/ಪಹಣಿ/ವಿವಾದ/38/2015–16 ದಿ: 25-4-16

ಉಪಸ್ಥಿತರು :– ಶ್ರೀ ಎ.ಚಂದ್ರನಾಯಕ, ಉಪತಹಶೀಲ್ದಾರರು
ನಾಡಕಛೇರಿ ಹಂಪಸಾಗರ

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀಮತಿ ಗಂಗಮ್ಮ ಗಂಡ ದಿ॥ ಬಸಲಿಂಗಯ್ಯ | ಶ್ರೀ ಎ.ಎಂ.ಕೊಟ್ರಬಸಯ್ಯ |
| ಬಟಗೇರಿ ಅಂಚೆ | ತಂದೆ ದಿ॥ ಗುರುಸಿದ್ದಯ್ಯ |
| ತಾ॥ಜಿ॥ ಕೊಪ್ಪಳ | ಹಂಪಸಾಗರ |

**ವಿಷಯ :– ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಹಂಪಸಾಗರ ಗ್ರಾಮಕ್ಕೆ ಸೇರಿದ ಜಮೀನು ಸ.ನಂ 100ಎ/1 ವಿಸ್ತೀರ್ಣ 5.52 ರಲ್ಲಿನ ಜಂಟೀ ಪಟ್ಟಾದಾರರಾದ ಶ್ರೀ ಬಸಲಿಂಗಯ್ಯ ಎಂ.ಜಿ. ಗುರುಸಿದ್ದಯ್ಯ ಇವರು ಪವತಿಯಾದ್ದರಿಂದ ವಾರಸರ ಪ್ರಕಾರ ಹೆಂಡತಿ ಹಕ್ಕು ಬದಲಾವಣೆ ಅರ್ಜಿ ಸಲ್ಲಿಸಿದ್ದು ತಕರಾರು ದಾಖಲಾತಿ ವಿಚಾರಣೆ.**

A.M.Kotrabasaiah

ಪೀಠಿಕೆ :–

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಹಂಪಸಾಗರ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 100ಎ/1 ಪೂರಾ ವಿಸ್ತೀರ್ಣ 5–52 ಎಕರೆ ಜಮೀನಿನಲ್ಲಿನ ಜಂಟೀ ಪಟ್ಟಾದಾರರಾದ ಶ್ರೀ ಬಸಲಿಂಗಯ್ಯ ಎಂ.ಜಿ ಗುರುಸಿದ್ದಯ್ಯ ಇವರು ದಿನಾಂಕ: 19/10/2014 ರಂದು ಮರಣ ಹೊಂದಿದ್ದು ವಾರಸು ಪ್ರಕಾರ ಹೆಂಡತಿಯಾದ ವಾದಿ ಶ್ರೀಮತಿ ಗಂಗಮ್ಮ ಗಂಡ ದಿ॥ ಬಸಲಿಂಗಯ್ಯ ಇವರು ನಿಗದಿತ ನಮೂನೆಯೊಂದಿಗೆ ಭೂಮಿ ಕೇಂದ್ರದಲ್ಲಿ ಅರ್ಜಿ ಸಲ್ಲಿಸಿಕೊಂಡಿದ್ದು ಸದರಿ ಅರ್ಜಿಯು ವಹಿವಾಟು ಸಂಖ್ಯೆ 46/2015–16 ಹಾಗೂ ಹ.ಬ.ಸಂಖ್ಯೆ H/23 2015–16 ರಂತೆ ದಾಖಲಾಗಿ ನಮೂನೆ 12 ಹಾಗೂ ನೋಟೀಸು ನಮೂನೆ 21 ಮುಂದಿನ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರಿಗೆ ರವಾನಿಸಲಾಗಿ ಇವರ ದ್ವಾರ ಗ್ರಾಮ ಲೆಕ್ಕಾಧಿಕಾರಿ ಹಂಪಸಾಗರ ಇವರು ನಮೂನೆ 12 ಹಾಗೂ ನೋಟಿಸು ನಮೂನೆ 21ನ್ನು ಜಾರಿ ಮಾಡಿರುತ್ತಾರೆ. ನೋಟೀಸು ಜಾರಿ ಮಾಡಲಾಗಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿವಾದಿಗಳು ತಮ್ಮ ಲಿಖಿತ ಪ್ರಕರಣವನ್ನು ಸ್ವೀಕೃತಿ ಸಂಖ್ಯೆ 2750/2015–16 ರಂತೆ ದಾಖಲಿಸಿರುತ್ತಾರೆ. ತಕರಾರು ದಾಖಲಾದ ಹಿನ್ನೆಲೆಯಲ್ಲಿ ಪ್ರಕರಣವನ್ನು ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣವನ್ನು ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು

ದಿನಾಂಕ:22-01-2016 ರಿಂದ 21-03-2016 ರವರೆಗೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಪ್ರತಿವಾದಿಗಳು ಹಾಜರಾಗಿದ್ದು, ಪ್ರತಿವಾದಿಗಳು ಸಲ್ಲಿಸಿರುವ ಲಿಖಿತ ತಕರಾರನ್ನು ಪರಿಶೀಲಿಸಲಾಗಿ ಪವತಿ ಅರ್ಜಿಗೆ ತಮ್ಮ ತಕರಾರು ಇರುವುದೆಂದು ಮಂಡಿಸಿರುತ್ತಾರೆ. ಆದರೆ ತಕರಾರು ಪತ್ರದಲ್ಲಿ ವಾರಸು ಪ್ರಕರಣಕ್ಕಾಗಿ, ಅವಿಭಕ್ತ ಕುಟುಂಬಕ್ಕಾಗಲಿ ಇರುವ ಸಂಬಂಧ ಇತ್ಯಾದಿಗಳನ್ನು ಉಲ್ಲೇಖಿಸಿರುವುದಿಲ್ಲ. ತಕರಾರನ್ನು ಪರಿಶೀಲಿಸಲಾಗಿ ಯಾವುದೇ ಅಂಶಗಳು ವ್ಯಕ್ತವಾಗಿರುವುದಿಲ್ಲ ಹಾಗೂ ವಾದಿಗಳು ಜಂಟೀ ಹಕ್ಕುದಾರರಾದ ಬಸಲಿಂಗಯ್ಯ ಎಂಜಿ.ಗುರುಸಿದ್ದಯ್ಯ ಇವರ ಹೆಂಡತಿ ಇರುವುದಾಗಿ ವಂಶವೃಕ್ಷ, ಗುರುತಿನ ಚೀಟಿ ಇತ್ಯಾದಿಗಳನ್ನು ಸಲ್ಲಿಸಿರುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಹಂಪಸಾಗರ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 100 ಎ/1 ಪೂರಾ ವಿಸ್ತೀರ್ಣ 5-52 ರಲ್ಲಿನ ಜಂಟೀ ಹಕ್ಕುದಾರರ ಪೈಕಿ ಬಸಲಿಂಗಯ್ಯ ಎಂ.ಜಿ.ಗುರುಸಿದ್ದಯ್ಯ ಇವರು ಪವತಿಯಾಗಿದ್ದು ವಾರಸು ಪ್ರಕಾರ ಹೆಂಡತಿ ಗಂಗಮ್ಮ ಗಂಡ ಬಸಲಿಂಗಯ್ಯ ಇವರನ್ನು ಇತರೆ ಜಂಟೀ ಪಟ್ಟಾದಾರರಾದ ಎ.ಎಂ.ಕೊಟ್ರಬಸಯ್ಯ ತಂದೆ ಗುರುಸಿದ್ದಯ್ಯ ಮತ್ತು ಅಂದಾನಯ್ಯ ಹೆಸರಿನೊಂದಿಗೆ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ. ಈ ಆದೇಶವನ್ನು ತೆರದ ನ್ಯಾಯಾಲಯದಲ್ಲಿ ದಿನಾಂಕ:..[illegible]..ರಂದು ಘೋಷಿಸಲಾಗಿದೆ

ಉಪ ತಹಶೀಲ್ದಾರರು
ನಾಡ ಕಾರ್ಯಾಲಯ
ಹಂಪಸಾಗರ

ಪ್ರತಿಗಳು :

1) ವಾದಿ + ಪ್ರತಿವಾದಿಗಳು
2) ಭೂಮಿ ಕೇಂದ್ರಕ್ಕೆ
3) ಕಚೇರಿ ಹೆಚ್ಚುವರಿ ಪ್ರತಿ